# ಲಿಂಗ ಸಮಾನತೆಗಾಗಿ ವಚನಕಾರರ ನಿಲುವು

**ಕುಮಾರಯ್ಯ ಡಿ.ಎಸ್.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.17013574

## ABSTRACT:

ಭಾರತೀಯ ಭಕ್ತಿ ಚಳುವಳಿಯಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ವಚನ ಚಳುವಳಿ ಪಡೆದಿದೆ ಎಂದು ಹೇಳಬಹುದು. ಕನ್ನಡ ನಾಡಿನ ಚರಿತ್ರೆಯಲ್ಲಿ 12ನೇ ಶತಮಾನ ಮಹತ್ವವನ್ನು ಪಡೆದಿದೆ. ಅಂದಿನ ಸಮಾಜದಲ್ಲಿದ್ದಂತಹ ಅನೇಕ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದಂತವರು ವಚನಕಾರರು. ತಮ್ಮ ವಿಚಾರಧಾರೆಗಳ ಮೂಲಕ ಸಮಾಜವನ್ನು ವೈಚಾರಿಕ ನೆಲೆಗೆ ಕೊಂಡೊಯ್ಯಲು ಪ್ರಯತ್ನಿಸಿದರು. ಬಸವಣ್ಣನ ನಾಯಕತ್ವದಲ್ಲಿ ಇಡೀ ಶರಣ ಶರಣೆಯರು ನವ ಸಮಾಜವನ್ನು ಕಟ್ಟಲು ಪ್ರಯತ್ನಿಸಿದಂತವರು. ಅಂದಿನ ಸಮಾಜದಲ್ಲಿ ಹೆಣ್ಣನ್ನು ಕೀಳು ಎಂಬ ಭಾವನೆ ಮನೆ ಮಾಡಿತ್ತು. ಇಂತಹ ಭಾವನೆಯನ್ನು ತೊಡೆದು ಹಾಕಲು ವಚನಕಾರರಂತೆ ವಚನಕಾರ್ತಿಯರು ಸಹ ತಮ್ಮ ವಚನಗಳ ಮೂಲಕ ಸಮಾಜವನ್ನು ಪ್ರಶ್ನಿಸಿದರು. ಪುರುಷ ಸಮಾಜದಲ್ಲಿ ಸ್ತ್ರೀಯು ಸಹ ಸರಿಸಮಾನವಾಗಿ ಬೆಳೆಯುವಂತೆ ಪ್ರೇರೇಪಿಸಿದರು. ಈ ವಚನ ಚಳುವಳಿ ಸ್ತ್ರೀಗೆ ಕೇವಲ ಗೃಹಿಣಿಯಾಗುವ ಅಥವಾ ಪತಿಗೆ ಆಧ್ಯಾತ್ಮಿಕ ಸಾಧನೆಯ ಸಹಾಯಕವಾಗುವ ಸ್ಥಾನವನ್ನು ಅಷ್ಟೇ ನೀಡದೆ ಅವಳ ಆತ್ಮವನ್ನು ಪೂರ್ಣ ಮೌಲ್ಯಮಾಪನ ಮಾಡಿದ ಮೊದಲ ಧಾರ್ಮಿಕ–ಸಾಮಾಜಿಕ ಚಳುವಳಿಯಾಗಿದೆ.

## KEYWORDS:

ಲಿಂಗ ಸಮಾನತೆ, ಸತಿ–ಪತಿ, ಮುಟ್ಟು, ಸೂತಕ, ಭಕ್ತಿ, ನಿಷ್ಠೆ, ಕಾಯಕ.

### ವಚನ ಸಾಹಿತ್ಯ ಮತ್ತು ಲಿಂಗ ಸಮಾನತೆ:

ವಚನ ಸಾಹಿತ್ಯ 12ನೇ ಶತಮಾನದ ಕರ್ನಾಟಕದ ಬೌದ್ಧಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉದ್ಭವಿಸಿದ ಶರಣ ಚಳುವಳಿಯ ಫಲವಾಗಿದೆ. ಈ ಸಾಹಿತ್ಯವು ಕೇವಲ ಧಾರ್ಮಿಕ ಚಳುವಳಿಯಾಗದೆ, ಸಾಮಾಜಿಕ ಚಳುವಳಿಯಾಗಿ ಪ್ರಾಮುಖ್ಯತೆಯನ್ನು ಪಡೆದಿದೆ.

ದೈಹಿಕ ಆಧಾರದ ಮೇಲೆ ಮಾನವ ಜನಾಂಗವನ್ನು ಸ್ತ್ರೀಯರು ಹಾಗೂ ಪುರುಷರು ಎಂದು ಎರಡು ಭಾಗಗಳಾಗಿ ವರ್ಗೀಕರಿಸಲಾಗಿದೆ. ಈ ಕಾರಣಕ್ಕಾಗಿ ಸ್ತ್ರೀಯರು ಪುರುಷರು ಎಂದು ಸಾಕಷ್ಟು ವ್ಯತ್ಯಾಸಗಳು ಹುಟ್ಟಿಕೊಂಡವು. ಅವರ ಆಸೆ–

ಆಕಾಂಕ್ಷೆ, ಧ್ಯೇಯ ಉದ್ದೇಶ, ಕೆಲಸ, ಹೊಣೆಗಾರಿಕೆ ಹಾಗೂ ಪಾತ್ರ, ಅಂತಸ್ತುಗಳು ವಿಭಿನ್ನವಾಗಿವೆ. ಮಹಿಳೆಯು ದೈಹಿಕವಾಗಿ, ಮಾನಸಿಕವಾಗಿ ಸದೃಢಳಲ್ಲ, ಅವಳು ಪುರುಷನಿಗೆ ಸಮಾನಾಗಲು ಸಾಧ್ಯವಿಲ್ಲ ಎಂದು ವಿವರಿಸಲಾಗಿತ್ತು. ಸ್ತ್ರೀಯು ಸಹ ಪುರುಷನಷ್ಟೆ ಸರಿಸಮಾನರು ಎಂದು ಹೋರಾಡುವ ಸ್ತ್ರೀಯರು ಎಲ್ಲಾ ಕಾಲದಲ್ಲಿ ಇದ್ದರೂ, ಅವರಿಗೆ ಸ್ತ್ರೀಯು ಪುರುಷನಷ್ಟು ಸರಿಸಮನಾಳಾಗಿ ಬೆಳೆಯಲು ಆಗಲಿಲ್ಲ.

**ವಚನಕಾರರ ಸಮಾನತೆಯ ದೃಷ್ಟಿ:**

ಭಾರತದ ಇತಿಹಾಸದಲ್ಲಿ ಸ್ತ್ರೀಗೆ ಸಂಪೂರ್ಣ ಸ್ವತಂತ್ರ ಹಾಗೂ ಪೂರ್ಣ ಗೌರವ ಲಭಿಸಿದ್ದು 12ನೇ ಶತಮಾನದ ವಚನಕಾರರ ಕಾಲದಲ್ಲಿ. ಸ್ತ್ರೀಯನ್ನು ಕಾಣುವ ವಚನಕಾರರ ದೃಷ್ಟಿ ಉದಾತ್ತವಾದದ್ದು, ವಿಚಾರವಾದದ್ದು. ಸ್ತ್ರೀಯಲ್ಲಿ ಅದ್ಭುತ ಶಕ್ತಿಯನ್ನು ಕಂಡ ಶರಣರು ಅವರಿಗೆ ಪುರುಷರ ಸಮಾನ ಸ್ಥಾನವನ್ನು ಕೊಟ್ಟಿದ್ದಾರೆ. ಪತಿಯ ಕಾಯಕದಲ್ಲಿ ನಿಷ್ಠಳಾಗಿ, ಮರೆವು ಕವಿದಾಗ ಅರಿವುಳ್ಳವಳಾಗಿ, ಬಹುಮುಖ ವ್ಯಕ್ತಿತ್ವ ಪಡೆದ ಸ್ತ್ರೀಗೆ ಸಮನಾದ ಸ್ಥಾನ ಕಲ್ಪಿಸಿಕೊಟ್ಟದ್ದು ಶರಣರ ವಿಶಾಲ ಮನಸ್ಸಿನ ಪ್ರತೀಕ.[1]

ಸ್ತ್ರೀಯನ್ನು ಸರಿಯಾಗಿ ಅರ್ಥೈಸಿಕೊಂಡ ವಚನಕಾರರು ಅವಳನ್ನು ಪುರುಷ ಸಮಾಜಕ್ಕೆ ಸಮಾನವಾಗಿ ಬೆಳೆಸುವ ದೃಷ್ಟಿಯನ್ನು ಕಂಡರು. ‘‘ವಚನಕಾರರು ಮೂಡುವ ಕಾಲಕ್ಕೆ ಭಾರತದ ಉಳಿದೆಲ್ಲ ಭಾಗಗಳಲ್ಲಿರುವಂತೆ ಕರ್ನಾಟಕದ ಸ್ತ್ರೀಯು ಸಹ ವೈದಿಕ ಸಂಸ್ಕೃತಿಗೆ ಸಿಕ್ಕಿ ನರಳುವ ಪರಿಸ್ಥಿತಿ ಉಂಟಾಗಿತ್ತು. ಮನು ಹಾಕಿದ ಎಲ್ಲಾ ನಿರ್ಬಂಧಗಳ ಪಂಜರದಲ್ಲಿ ಹೆಣ್ಣು ಸಿಕ್ಕಿ ತೊಳಲಾಡುತ್ತಿದ್ದಳು. ಹೆಣ್ಣು ಜನಿಸಿರುವುದು ಪುರುಷನ ಸೇವೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಮಾತ್ರ. ಸ್ತ್ರೀಯು ತನಗೆ ಅಸ್ತಿತ್ವವೇ ಇಲ್ಲವೆಂಬಂತೆ ಬಾಳಬೇಕಾಗುತ್ತಿತ್ತು.

‘‘ಹೆಣ್ಣು ಕೇವಲ ಭೋಗದ ವಸ್ತುವಾಗಿ ಶತ ಶತಮಾನಗಳಿಂದಲೂ ಅಲಕ್ಷಿಸಲ್ಪಟ್ಟಿದ್ದಳು. ಅಂತಹ ಹೆಣ್ಣಿಗೆ ಉನ್ನತ ಸ್ಥಾನ ಕೊಟ್ಟವರು ಶರಣರು. ಸ್ತ್ರೀ ಸಮುದಾಯವನ್ನು ಕತ್ತಲಲ್ಲಿಟ್ಟು ಸಮಾಜದಲ್ಲಿ ಬೆಳಕು ತರಲು ಪ್ರಯತ್ನಿಸಿದವರಿಗೆ ಸೋಲು ಖಂಡಿತ ಎಂದು ಮನಗಂಡಿದ್ದರು. ಸಮಾಜ ರಥದ ಒಂದು ಚಕ್ರವನ್ನೇ ಬದಿಗಿಟ್ಟು ಬಹು ಮುಂದೆ ಹೋಗುವುದು ಸಾಧ್ಯವಿಲ್ಲವೆಂಬುದನ್ನವರು ತಿಳಿದುಕೊಂಡಿದ್ದರು. ‘‘ಅಂತೆಯೇ ಸತಿ-ಪತಿಗಳೊಂದಾದ ಭಕ್ತಿ ಹಿತವಹುದು ಶಿವಂಗೆ’’ ಎಂದು ಸಾರಿದರು. ಅಕ್ಕಮಹಾದೇವಿಯಂಥ ಸ್ತ್ರೀಯರಿಗೂ ಶಿವಾನುಭವ ಮಂಟಪದಲ್ಲಿ ಅತ್ಯುನ್ನತ ವೇದಿಕೆಯನಿತ್ತು ಗೌರವಿಸಿದರು. ಈ ಕಾರಣದಿಂದ ಶರಣರ ಕ್ರಾಂತಿಯಲ್ಲಿ ಸ್ತ್ರೀಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದಂತೆ ಬೇರಾವ ಕ್ರಾಂತಿಯಲ್ಲೂ ಕಂಡು ಬರುವುದಿಲ್ಲ. ಈ ಕಾರಣದಿಂದ ಅಂದಿನ ಸ್ತ್ರೀಯರೂ ಕೂಡ ಹಿಂದೆ ಬೀಳಲಿಲ್ಲ. ಸಿಕ್ಕ

ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ವಿಚಾರ, ನಿಷ್ಠೆ, ಕಾಯಕ, ಭಕ್ತಿ, ಶೀಲ, ಕಿಚ್ಚು ಮುಂತಾದ ಕಡೆಗಳಲ್ಲಿ ಶರಣರನ್ನೇ ಶರಣಾಗತರಾಗಿಸಿದ ವಚನಕಾರ್ತಿಯರು ವಚನಕಾರರ ಇತಿಹಾಸದಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ."[2]

**ವಚನಗಳಲ್ಲಿ ಸಮಾನತೆಯ ಪ್ರತಿಪಾದನೆ:**

ವಚನಕಾರರು ಸ್ತ್ರೀ–ಪುರುಷ ಎಂಬ ಲಿಂಗಭೇದವನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಮುಂದಾದರು. ಜೇಡರ ದಾಸಿಮಯ್ಯನು ಸ್ತ್ರೀಯರು ಪುರುಷರಿಗೆ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆಯಿಂದ ಬೆಳೆಯಲಿ ಎಂದು ಬಯಸಿದನು. ದಾಸಿಮಯ್ಯನ ಒಂದು ವಚನದಲ್ಲಿ ಗಂಡು ಹೆಣ್ಣುಗಳ ನಡುವೆ ಯಾವುದೇ ರೀತಿಯ ಭೇದವಿಲ್ಲ ಎಂದು ಹೇಳಿದ್ದಾರೆ. ಆ ವಚನ ಈ ರೀತಿ ಇದೆ:

**ಮೊಲೆ ಮೂಡಿ ಬಂದಡೆ ಹೆಣ್ಣೆಂಬರು,**
**ಗಡ್ಡ ಮೀಸೆ ಬಂದಡೆ ಗಂಡೆಂಬರು.**
**ನಡುವೆ ಸುಳಿವ ಆತ್ಮನು**
**ಹೆಣ್ಣು ಅಲ್ಲ, ಗಂಡು ಅಲ್ಲ ಕಾಣ ರಾಮನಾಥ.**[3]

ಸ್ತ್ರೀಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವನ್ನು ನೀಡದೆ ಅವಳನ್ನು ಹೀನಾಯವಾಗಿ ಕಾಣಲಾಗುತ್ತಿತ್ತು. ದಾಸಿಮಯ್ಯ ಹೆಣ್ಣು–ಗಂಡಿನ ನಡುವೆ ಯಾವುದೇ ರೀತಿಯ ವ್ಯತ್ಯಾಸವಿಲ್ಲವೆಂದು ಹೇಳಲು ಪ್ರಯತ್ನಿಸುತ್ತಾರೆ. ದೈಹಿಕ ರಚನೆ ಆಧಾರದ ಮೇಲೆ ಹೆಣ್ಣು–ಗಂಡು ಎಂದು ವಿಭಾಗ ಮಾಡುವರು. ಮೊಲೆ ಮೂಡಿ ಬಂದರೆ ಹೆಣ್ಣು, ಗಡ್ಡ ಮೀಸೆ ಬಂದರೆ ಗಂಡು, ಎಂದು ಕರೆಯುತ್ತಾರೆ. ಇವರಿಬ್ಬರಲ್ಲಿ ಇರುವ ಆತ್ಮವನ್ನು ಏನೆಂದು ಕರೆಯಲು ಸಾಧ್ಯ? ಇದು ಶಾರೀರಿಕವಾಗಿ ವ್ಯತ್ಯಾಸವೇ ವಿನಃ ಲಿಂಗಭೇದವಿಲ್ಲ ಎಂದಿದ್ದಾನೆ. ಸ್ತ್ರೀ–ಪುರುಷರ ದೈಹಿಕ ವ್ಯತ್ಯಾಸ ಪ್ರಾಕೃತಿಕವಾದದ್ದಾಗಿದೆ. ಆದರೆ ಅವರಲ್ಲಿನ ಆತ್ಮದ ದೃಷ್ಟಿಯಿಂದ ಸ್ತ್ರೀ–ಪುರುಷ ಭೇದವಿಲ್ಲವೆಂದು ದಾಸಿಮಯ್ಯ ಸ್ತ್ರೀಯರ ಶೋಷಣೆಯನ್ನು ವಿರೋಧಿಸಿದನು. ದಾಸಿಮಯ್ಯ ಮುಂದುವರಿದು:

**ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ?**
**ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ?**
**ಕಡೆಯಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?**
**ನೀ ತೊಡಗಿಕ್ಕಿದ ತೊಡಕ ನೀ, ಲೋಕದ ಜಡರೆತ್ತ ರಾಮನಾಥ.**[4]

ಮಹಿಳೆಯರಿಗೆ ಮೊಲೆ ಮುಡಿಗಳಿದ್ದದ್ದರಿಂದ ಅವರು ಸ್ತ್ರೀಯರೆಂದು ಗುರುತಿಸುತ್ತಾರೆ. ದೇಹಕ್ಕಿರುವ ಈ ಲಕ್ಷಣ ಪ್ರಾಣಕ್ಕಿರುವುದಿಲ್ಲ. ಹೆಣ್ಣು, ಒಡೆಯ, ಅಂತ್ಯಜ ಎಂಬ ಭೇದಗಳೊಳಗಿನ ಆತ್ಮ ಒಂದೇ ಆಗಿರುತ್ತದೆ. ಇದರಿಂದ ಸ್ತ್ರೀ–ಪುರುಷರಲ್ಲಿ ಭೇದವೆಣಿಸಲಾಗದು ಎಂಬ ಸಮಾನತೆಯ ನಿಲುವಿದೆ. ಇಂತಹ

ಭೇದವನ್ನು ಪೂರ್ಣವಾಗಿ ಅಳಿಸಿಹಾಕಲು ದಾಸಿಮಯ್ಯ ಪ್ರಯತ್ನಿಸಿರುವ ವಚನ ಹೀಗಿದೆ:

**ನಿಡಿದೊಂದು ಕೋಲುವನು ಕಡಿದು ಎರಡ ಮಾಡಿ**
**ಅಡಿಯ ಹೆಣ್ಣು ಮಾಡಿ, ಒಡತಣದ ಗಂಡು ಮಾಡಿ.**
**ನಡುವೆ ಹೊಸದಡಿ ಹುಟ್ಟಿದ ಕಿಚ್ಚು ಹೆಣ್ಣೋ, ಗಂಡೋ ರಾಮನಾಥ.**[5]

ಎಂದು ಪ್ರಶ್ನಿಸುವ ಮೂಲಕ ಸ್ತ್ರೀ–ಪುರುಷರನ್ನು ಪ್ರತ್ಯೇಕವಾಗಿ ನೋಡುವುದಕ್ಕೆ ಆಗುವುದಿಲ್ಲ ಎಂದಿದ್ದಾನೆ. ಗಂಡು–ಹೆಣ್ಣು ಎಂಬುದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಮಾನವ ಸಮಾಜದಲ್ಲಿ ಇವೆರಡು ಸಹ ಕಣ್ಣುಗಳಿದ್ದಂತೆ. ಈ ಎರಡು ಅಂಶಗಳಿಗೆ ಸಮಾನ ಸ್ಥಾನಮಾನವಿದೆ. ಒಂದನ್ನು ಬಿಟ್ಟು ಮತ್ತೊಂದು ಇರಲು ಸಾಧ್ಯವಿಲ್ಲ.

ಸ್ತ್ರೀ–ಪುರುಷರಲ್ಲಿ ಯಾರೂ ಮೇಲು ಇಲ್ಲ, ಯಾರು ಕೀಳು ಇಲ್ಲ. ಇಂತಹ ನಿಲುವು ಸ್ತ್ರೀ–ಪುರುಷರಿಬ್ಬರ ಸಮಾನತೆಯನ್ನು ಹೋಲುತ್ತದೆ. ದಾಸಿಮಯ್ಯನು ವ್ಯಕ್ತಪಡಿಸುವ ವಿಚಾರಗಳು ಸಾಮಾಜಿಕ ಸಂದರ್ಭದಲ್ಲಿ ಅತ್ಯಂತ ಹೊಸತನವನ್ನು ಹೊಂದಿರುವಂತಹವು. ದಾಸಿಮಯ್ಯನು ಹೇಳುವಂತೆ ಗಂಡು–ಹೆಣ್ಣು ಇಬ್ಬರೂ ಸಮಾಜದಲ್ಲಿ ಸಮತೋಲನ ಸ್ಥಿತಿಯಲ್ಲಿ ಇರಬೇಕೆಂದು ಹೇಳುತ್ತಾನೆ.

**ಅಂಬಿಗರ ಚೌಡಯ್ಯ ಮತ್ತು ಸತ್ಯಕ್ಕನ ವಚನ:**

ಗಂಡು–ಹೆಣ್ಣಿನ ಮಧ್ಯೆ ಲಿಂಗಭೇದದ ಕುರಿತಂತೆ ಮಾನವನ ವಿಕಲ್ಪತೆಯನ್ನು ಶುದ್ಧೀಕರಿಸಲು ಅಂಬಿಗರ ಚೌಡಯ್ಯನ ಒಂದು ವಚನ ಹೀಗಿದೆ:

**ಶುಕ್ಲ ಶೋಣಿತ ಪಿಂಡೈಕ್ಯನ ಚಿತ್ತ ವಾಯು ಆರು ದಳದ ಪದ್ಮದಲ್ಲಿಹುದು.**
**ಮೊಲೆ ಮುಡಿ ಬಂದರೆ ಆ ಪಿಂಡನು ಹೆಣ್ಣೆಂಬರು,**
**ಗಡ್ಡ ಮೀಸೆಗಳು ಬಂದರೆ ಆ ಪಿಂಡವನು ಗಂಡೆಂಬರು.**
**ಆ ಇಬ್ಬರ ನಡುವೆ ಸುಳಿದ ಆತ್ಮನು ಹೆಣ್ಣು ಅಲ್ಲ ಗಂಡು ಅಲ್ಲ ನೋಡಾ.**
**ಇದರಂತುವ ತಿಳಿದು ನೋಡಿಹನೆಂದರೆ**
**ಶ್ರುತಿಗಳಿಗೆ ಗೋಚರರೆಂದ ನಮ್ಮ ಅಂಬಿಗರ ಚೌಡಯ್ಯ.**[6]

ಹುಟ್ಟಿದ ಮಗುವನ್ನು ದೈಹಿಕ ರಚನೆಯ ಆಧಾರದ ಮೇಲೆ ಗಂಡು–ಹೆಣ್ಣು ಎಂದು ವಿಂಗಡಿಸಬಹುದೇ ಹೊರತು, ಆತ್ಮದ ಆಧಾರದ ಮೇಲೆ ಗಂಡು–ಹೆಣ್ಣು ಎಂದು ವಿಭಾಗಿಸಲು ಸಾಧ್ಯವಿಲ್ಲ ಎಂದು ಅಂಬಿಗರ ಚೌಡಯ್ಯ ಹೇಳುತ್ತಾನೆ.

**ಮೊಲೆ ಮುಡಿ ಇದ್ದದೆ ಹೆಣ್ಣೆಂದು ಪ್ರಮಾಣಿಸಲಿಲ್ಲ,**
**ಕಾಸೆ ಮೀಸೆ ಕಠಾರ ಇತ್ತುದೆ ಗಂಡಂದು ಪ್ರಮಾಣಿಸಲಿಲ್ಲ.**
**ಅದು ಜಗದಹಾಗೆ ಬಲ್ಲವರ ನೀತಿಯಲ್ಲಿ**

**ಎತ್ತರ ಹಣ್ಣಾದಡೂ ಮಧುರವು ಕಾರಣ.**
**ಅಂದವಿಲ್ಲದ ಕುಸುಮಕ್ಕೆ ವಾಸನೆ ಕಾರಣ.**
**ಇದರಂತವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ.**[7]

ಗಂಡು-ಹೆಣ್ಣಿನ ನಡುವಿನ ಭೇದ ದೈಹಿಕ ಲಕ್ಷಣಗಳೇ ಹೊರತು ಬೇರೆಯಿಲ್ಲ. ಇದನ್ನು ತಿಳಿಯದ ಸಮಾಜ ಗಂಡಿಗೊಂದು ನಿಯಮ, ಹೆಣ್ಣಿಗೊಂದು ನಿಯಮ ರೂಢಿಸುವುದು ಸರಿಯಲ್ಲ ಎಂದು ಪ್ರಶ್ನಿಸುವ ಸತ್ಯಕ್ಕ ಹೆಣ್ಣಿನ ಧ್ವನಿಯಾಗಿ ಕಾಣುತ್ತಾಳೆ. ಹೆಣ್ಣಿನ ಜೀವನ ಬದುಕಿನ ಮೌಲ್ಯಗಳಿಗೆ ಸಂಬಂಧಿಸಿದ ಸ್ತ್ರೀ ಪ್ರಜ್ಞೆ ಇರುವುದು ಕಂಡುಬರುತ್ತದೆ. ಮರದಲ್ಲಿರುವ ಹಣ್ಣು ಮತ್ತು ಹೂ ಹೇಗೆ ರುಚಿ ಮತ್ತು ಸುಗಂಧಕ್ಕೆ ಕಾರಣವೋ, ಈ ಸಮಾಜಕ್ಕೆ ಹೆಣ್ಣಿನ ಅಗತ್ಯತೆ ಇದೆ ಎಂಬುದನ್ನು ಸತ್ಯಕ್ಕ ಹೇಳಲು ಪ್ರಯತ್ನಿಸುತ್ತಾಳೆ.

**ವಚನಕಾರರು ಮತ್ತು ಸೂತಕದ ಪರಿಕಲ್ಪನೆ:**

ಭಾರತೀಯ ಸಮಾಜದಲ್ಲಿ ಹೆಣ್ಣನ್ನು ಸೂತಕದ ಸಂಕೇತವನ್ನಾಗಿ ಮಾಡಿ ಧಾರ್ಮಿಕ ವಿಧಿ ವಿಧಾನಗಳಿಂದಲೂ ದೂರವಿಡಲಾಗಿತ್ತು. ದೈಹಿಕವಾಗಿ ಸ್ತ್ರೀ ಮತ್ತು ಪುರುಷ ಭಿನ್ನರಾಗಿರುವುದರಿಂದ, ಸ್ತ್ರೀಯನ್ನು ಧಾರ್ಮಿಕವಾಗಿ ಭಿನ್ನ ಎಂಬ ಭಾವನೆ ಉಂಟಾಗಲು ಕಾರಣವಾಯಿತು. ಇಂತಹ ವಿಭಿನ್ನ ನಂಬಿಕೆಗಳಿಗೆ ವಿರೋಧ ವ್ಯಕ್ತಪಡಿಸಿದವರು ವಚನಕಾರರು. ಯಜ್ಞಯಾಗಾದಿಗಳಲ್ಲಿ ಭಾಗವಹಿಸುವ ಅವಕಾಶವಿರಲಿಲ್ಲ. ವಚನಕಾರರು "ಸತಿ ಪುರುಷರಿಬ್ಬರೂ ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ ಅದೇ ಮಾಟ. ಕೂಡಲಸಂಗಮದೇವ ಕೂಡುವ ಕೂಟ" ಎನ್ನುತ್ತಾರೆ.[8]

ಈ ವಚನದಲ್ಲಿ ಗಂಡ-ಹೆಂಡತಿ ಇಬ್ಬರು ಸಮಾನತೆಯ ಪ್ರತಿಪಾದನೆಯಾಗಿದೆ. ಬಸವಣ್ಣ ಗಂಡ-ಹೆಂಡತಿ ಸಾಮರ್ಥ್ಯದಿಂದ ಮಾಡುವ ಪೂಜೆ, ಭಕ್ತಿ ಕೂಡಲಸಂಗಮನನ್ನು ಕಾಣುವುದಕ್ಕೆ ಒಂದು ಶಕ್ತಿ ಎಂದಿದ್ದಾರೆ. ಜೀವನದ ಪರಿಪೂರ್ಣತೆಗೆ ಗಂಡ-ಹೆಂಡತಿ ಇಬ್ಬರೂ ಬೇಕು. ಇದರಲ್ಲಿ ಗಂಡನಾಗಲಿ, ಹೆಂಡತಿಯಾಗಲಿ ಯಾರೂ ಸಹ ನಾನು ಮೇಲು, ನೀನು ಕೀಳು ಎಂಬ ಭಾವನೆಯನ್ನು ಇಟ್ಟುಕೊಂಡಿರಬಾರದು ಎನ್ನುತ್ತಾನೆ.

ವಚನ ಕಾಲದಲ್ಲಿ ಹೆಣ್ಣು ಸಹ ಗಂಡಿನಂತೆ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಭಾಗವಹಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡರು. ಗಂಡನ ಸಾಧನೆಯಲ್ಲಿ ಪಾಲ್ಗೊಳ್ಳುವುದಲ್ಲದೆ ಅವರ ತಪ್ಪು ಮಾತುಗಳನ್ನು ಸರಿಪಡಿಸಿಕೊಡುವುದು ವಚನಗಳಲ್ಲಿ ಉಲ್ಲೇಖಗಳಿವೆ. ಇದಕ್ಕೆ ಮೋಳಿಗೆ ಮಹಾದೇವಿ, ಕಾಳವ್ವೆ ಇತ್ಯಾದಿ ವಚನಕಾರ್ತಿಯರನ್ನು ಉದಾಹರಿಸಬಹುದು. ಹೆಂಡತಿ ಎಂದರೆ ಗಂಡ ಹೇಳುವುದಕ್ಕೆ ತಲೆಯಾಡಿಸುವ ಪ್ರಾಣಿ ಎಂಬಂತಿದ್ದ ಮಹಿಳೆಯರು 12ನೇ ಶತಮಾನದಲ್ಲಿ ಗಂಡನಿಗೆ ಬುದ್ಧಿವಾದ ಹೇಳುವಷ್ಟು ಪ್ರಬುದ್ಧೆಯಾದದ್ದು ಗಮನಾರ್ಹವಾದ ಬೆಳವಣಿಗೆಯಾಗಿದೆ.

**ಬಸವಣ್ಣನ ಹೆಂಡತಿ ನೀಲಮ್ಮನ ವಚನದಲ್ಲಿ:**

"ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿಯಾದನಯ್ಯ ಸಂಗಯ್ಯಾ"[9] ಎಂದು ಹೇಳಿರುವುದು, ಹೆಂಡತಿ ಗಂಡನಿಗೆ ತನ್ನ ವಿಚಾರವನ್ನು, ಅನುಭವವನ್ನು ಹೇಗೆ ಹಂಚಿಕೊಳ್ಳುತ್ತಿದ್ದಳು ಎಂಬುದನ್ನು ತಿಳಿಸುತ್ತದೆ. ಸತಿಪತಿಯೊಂದಿಗೆ ತನ್ನ ಅನುಭವವನ್ನು ಹಂಚಿಕೊಳ್ಳಲು ವಚನ ಸಾಹಿತ್ಯ ಅವಕಾಶ ಮಾಡಿಕೊಟ್ಟಿತ್ತು ಎನ್ನಬಹುದು.

**ಲಿಂಗಭೇದ ಮತ್ತು ಮಹಿಳಾ ಸಬಲೀಕರಣ:**

"ಬಸವಣ್ಣನ ಕಾಲದಲ್ಲಿ ಮಹಿಳೆಯನ್ನು ಪುರುಷನ ಸಮಾನವಾಗಿಯೇ ಕಂಡದ್ದು ತಿಳಿಯುತ್ತದೆ. ಸಾಮಾನ್ಯ ಶಕ 1131 ರಿಂದ 1167ರ ಅವಧಿಯಲ್ಲಿ ಬಸವಣ್ಣನವರು ಕೈಗೊಂಡ ಸಾಮಾಜಿಕ, ಧಾರ್ಮಿಕ ಆಂದೋಲನದ ಫಲವಾಗಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಸ್ಥಾನಮಾನಗಳು ದೊರೆತವು. ಮಹಿಳೆ ಪುರುಷನ ಬಾಳ ದೇವತೆಯೆಂಬ ಅರಿವು ಅಂದಿನ ವಚನಕಾರರಿಗಿತ್ತು. ಬಹುಶಃ ಕಾಯಕ ಜೀವಿಗಳೆಲ್ಲರ ಪತ್ನಿಯರು ತಮ್ಮ ತಮ್ಮ ಪತಿಗಳು ಕೈಗೊಂಡ ವೃತ್ತಿಯಲ್ಲಿ ಪಾಲ್ಗೊಂಡಿದ್ದರು. ಹಾಗೆಯೇ ಪಾಲ್ಗೊಳ್ಳುವ ಅವಕಾಶವನ್ನು ವಚನಕಾರರು ನಿರ್ಮಾಣ ಮಾಡಿದ್ದರು".[10]

ಮಹಿಳೆಯನ್ನು ಮುಖ್ಯವಾಹಿನಿಯಿಂದ ದೂರವಿರಿಸಿದ ವೈದಿಕ ಪರಂಪರೆಯು ಅವರನ್ನು ಅಸ್ಪೃಶ್ಯಗಳಂತೆ ಕಾಣುತ್ತಿತ್ತು. ಧಾರ್ಮಿಕ ವಿಧಿ ವಿಧಾನಗಳಲ್ಲಿ ಅವಳು ಭಾಗವಹಿಸುವಂತಿರಲಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಅವಳ 'ಮುಟ್ಟು'. ವಚನಕಾರರು ಅವಳಿಗಂಟಿದ ಮುಟ್ಟಿನ ಕಟ್ಟನ್ನು ಬಿಚ್ಚಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆಕೆ ಭಾಗವಹಿಸುವ ಅವಕಾಶವನ್ನು ನಿರ್ಮಾಣ ಮಾಡಿಕೊಟ್ಟರು.

'ಹೊಲೆ ಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ'. ಹೊಲೆಯುಂಟೆ ಲಿಂಗವಿದ್ದಲ್ಲಿ? ಮನದ ಸೂತಕಕ್ಕೆ ತೆರವುಂಟೆ? "ಸತಿ ಭಕ್ತೆ ಆದರೆ ಹೊಲೆಗೆಂಜಲಾಗದು ಎಂಬಂತಹ ಮಾತುಗಳು ಮಹಿಳೆಯಾದರೇನಂತೆ ಅನುಭಾವದಲ್ಲಿ ಅವಳಿಗೂ ಒಂದು ನೆಲೆ ಇದೆ ಎಂಬುದನ್ನು ತಿಳಿಸಿಕೊಡುತ್ತದೆ. ಅವರ ಅಸ್ತಿತ್ವವನ್ನು ರುಜುವಾತುಗೊಳಿಸುತ್ತದೆ".

ವಚನಕಾರರು ಸ್ತ್ರೀ ಸಮಾನತೆಯನ್ನು ಸಾರುತ್ತಾ ಸ್ತ್ರೀ ಗೌರವವನ್ನು ಪ್ರತಿಪಾದಿಸಿದರು. ಪುರುಷ ಪ್ರಧಾನ ಸಮಾಜದಲ್ಲಿ ಶೋಷಣೆಗೆ ಗುರಿಯಾಗಿದ್ದ ಸ್ತ್ರೀ ಕೇವಲ ಭೋಗದ ವಸ್ತುವಾಗಿ ದೌರ್ಜನ್ಯಕ್ಕೊಳಗಾಗಿದ್ದಳು. ಇದನ್ನು ಕಂಡಂತಹ ವಚನಕಾರರು ಸ್ತ್ರೀಯರ ಶೋಷಣೆಯನ್ನು ಹೋಗಲಾಡಿಸಲು ಮತ್ತು ಲಿಂಗ ಸಾಮರಸ್ಯಕ್ಕೆ ಪ್ರಯತ್ನಿಸಿದರು.

"ಸ್ತ್ರೀ–ಪುರುಷರಲ್ಲಿ ಭೇದಭಾವವನ್ನು ತೋರದೆ ವಚನಕಾರರು ಲಿಂಗ ದೀಕ್ಷೆಯನ್ನು ಹೊಂದಿದ್ದರು. ಆತ್ಮೋದ್ಧಾರದ ಹಂಬಲ ಅವರಲ್ಲಿ ತುಡಿಯುತ್ತಿತ್ತು. ಮೋಕ್ಷ ಸಾಧನೆಗೆ ಮಹಿಳೆ ಅರ್ಹಳೆಂಬುದನ್ನು ಅವರು ಮನಗಂಡಿದ್ದರು. ಆತ್ಮೋದ್ಧಾರದ ಮುಚ್ಚಿದ ಬಾಗಿಲ ಮುದ್ರೆಯನ್ನೊಡೆದು ಮಹಿಳೆಗೆ ಪರಮಾತ್ಮನ ಭವ್ಯ ದರ್ಶನವನ್ನು ಮಾಡಿಸಿದರು. ಸಾಧನೆಯ ಒಂದೊಂದೇ ಮೆಟ್ಟಿಲುಗಳನ್ನು ಏರಿ ಶಿವಯೋಗ ಸಿದ್ಧಿಗಳಿಂದ ಅವಳು ಅಧ್ಯಾತ್ಮ ಅನುಭವದ ಸುಖದ ತುದಿಯನ್ನೇರಿ ನಿಂತಳು".[11]

"ವಚನಕಾರರು ಜೀವನವನ್ನು ಪ್ರೀತಿಸಿದವರು. ಸತಿ–ಪತಿಗಳ ನಡುವೆ ಅನ್ಯೋನ್ಯತೆ ಬೆಸೆದುಕೊಂಡಿತ್ತು. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಅವರು ಒಪ್ಪಿರಲಿಲ್ಲ. ಅವರದು ಸತಿ–ಪತಿಗಳ ಸಮಾನ ಸಾಮಾಜಿಕ ವ್ಯವಸ್ಥೆಯಾಗಿತ್ತು. ಪತಿ–ಸತಿಯ ಮೇಲಾಗಲಿ, ಸತಿ–ಪತಿಯ ಮೇಲಾಗಲಿ ಅಧಿಕಾರ ಚಲಾಯಿಸುವ ಪ್ರವೃತ್ತಿ ಅವರಲ್ಲಿ ಇರಲಿಲ್ಲ. 'ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದು ನಂಬಿದ್ದರು. ಅಲ್ಲಮನು ತನ್ನ ವಚನ ಒಂದರಲ್ಲಿ ಸತಿ–ಪತಿಗಳಲ್ಲಿ ಸಮಾನತೆ ನೆಲೆಗೊಂಡರೆ ಅವರು ಗುಹೇಶ್ವರನನ್ನು ಕಾಣುತ್ತಾರೆ ಎನ್ನುತ್ತಾನೆ"[12]

ಇದನ್ನೆಲ್ಲಾ ಗಮನಿಸಿದಾಗ ವಚನಕಾರರು ಲಿಂಗಭೇದವನ್ನು ಪ್ರಶ್ನಿಸಿದರು. ಹೆಣ್ಣಿಗೆ ಉನ್ನತ ಸ್ಥಾನಮಾನಗಳು ಸಮಾಜದಲ್ಲಿ ಲಭಿಸಲೆಂದು ಪ್ರಯತ್ನಿಸಿದರು. ವಚನಕಾರರು ಹೆಣ್ಣು ಸಮಾಜದಲ್ಲಿ ಗಂಡಿನ ಸ್ಥಾನಕ್ಕೆ ಸರಿಸಮಾನಳೆಂದು ತೋರಿಸಿಕೊಟ್ಟರು. ಸ್ತ್ರೀಗೆ ಎಲ್ಲಾ ಕ್ಷೇತ್ರಗಳಲ್ಲೂ ಅವಕಾಶಗಳು ಲಭಿಸಿದಾಗ ಸ್ತ್ರೀ ಸ್ವಾತಂತ್ರ್ಯಳಾಗುತ್ತಾಳೆ. ಅವಳು ಸ್ವಾತಂತ್ರ್ಯವಾಗಿ ದುಡಿಯುವ ಶಕ್ತಿ ಇದೆ ಎಂದು ತೋರಿಸಿಕೊಟ್ಟರು. ದೈಹಿಕ ರಚನೆಯ ಆಧಾರದ ಮೇಲೆ ಸ್ತ್ರೀಯನ್ನು ಅಬಲೆಯೆಂದು ಕಡೆಗಣಿಸಿದ್ದ ಪುರುಷ ಸಮಾಜವನ್ನು ವಚನಕಾರರು ಪ್ರಶ್ನಿಸಿದರು. ಸ್ತ್ರೀಯು ಸಹ ಪುರುಷನಷ್ಟೇ ಸಮಾನಳು, ಅವಳನ್ನು ಯಾವುದೇ ಕಾರಣಕ್ಕೂ ಕೆಳಸ್ತರದಲ್ಲಿಟ್ಟು ನೋಡಬಾರದು ಎಂದು ಸಾರಿದರು.

## ಅಡಿ ಟಿಪ್ಪಣಿಗಳು:

1. ಬಸವರಾಜ ಸಬರದ, (2020), ವಚನ ಚಳುವಳಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. 77
2. ಅದೇ, ಪು.ಸಂ. 77
3. ವಿದ್ಯಾಶಂಕರ ಎಸ್. (ಸಂ), (2001), ಸಂಕೀರ್ಣ ವಚನ: ಸಂಪುಟ ಎರಡು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 284
4. ಅದೇ, ಪು.ಸಂ. 257
5. ಅದೇ, ಪು.ಸಂ. 253
6. ಕಲಬುರ್ಗಿ ಎಂ.ಎಂ. (ಸಂ), (2001), ಸಮಗ್ರ ವಚನ ಸಂಪುಟ (6), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 85
7. ವೀರಣ್ಣ ರಾಜೂರ (ಸಂ), (2021), ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 446
8. ವೀರಣ್ಣ ರಾಜೂರ (ಸಂ), (2021), ಬಸವಣ್ಣನವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 414
9. ವೀರಣ್ಣ ರಾಜೂರ (ಸಂ), (2021), ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 414
10. ಹೂಗಾರ ಎಂ.ಬಿ., (2012) ವಚನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.ಸಂ. 16
11. ಅದೇ, ಪು.ಸಂ. 21–22
12. ಅದೇ, ಪು.ಸಂ. 22

**ಪರಾಮರ್ಶನ ಗ್ರಂಥಗಳು:**


1. ಬಸವರಾಜ ಸಬರದ, (2020), ವಚನ ಚಳುವಳಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ವಿದ್ಯಾಶಂಕರ ಎಸ್. (ಸಂ), (2001), ಸಂಕೀರ್ಣ ವಚನ: ಸಂಪುಟ ಎರಡು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಕಲಬುರ್ಗಿ ಎಂ.ಎಂ. (ಸಂ), (2001), ಸಮಗ್ರ ವಚನ ಸಂಪುಟ (6), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ವೀರಣ್ಣ ರಾಜೂರ (ಸಂ), (2021), ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ವೀರಣ್ಣ ರಾಜೂರ (ಸಂ), (2021), ಬಸವಣ್ಣನವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
6. ಹೂಗಾರ ಎಂ.ಬಿ., (2012) ವಚನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.